ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

# DIRECTORATE OF MEDICAL EDUCATION

Ananda Rao Circle, Bangalore-560009.

ಸಂಖ್ಯೆ: ವೈಶಿ/ಎಸ್‌ಆರ್‌ಓ(1)/14/2018-19 ದಿನಾಂಕ: 02-06-2018

**ಅಧಿಸೂಚನೆ**

ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ ಈ ಸಂಸ್ಥೆಯ ನಿರ್ದೇಶಕರ ಹಾಗೂ ಡೀನ್ ಹುದ್ದೆಯ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಕನಿಷ್ಠ ವಿದ್ಯಾರ್ಹತೆ ಮತ್ತು ಇತರೆ ವಿವರಗಳು ಎಂ.ಸಿ.ಐ ನಿಯಮಾವಳಿಗಳನ್ವಯ ಹಾಗೂ ಸದರಿ ಸಂಸ್ಥೆಯ ಬೈಲಾಗಳನ್ವಯ ಪರಿಗಣಿಸಲಾಗುವುದು.

**ಅರ್ಹತಾ ಮಾನದಂಡಗಳು:**

1. ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ ಇಲ್ಲಿ ಕನಿಷ್ಠ 10 ವರ್ಷ ಪ್ರಾಧ್ಯಾಪಕರು/ ಸಹ ಪ್ರಾಧ್ಯಾಪಕರು ಆಗಿ ಕರ್ತವ್ಯ ನಿರ್ವಹಿಸಿದ ಬೋಧನಾ ಅನುಭವ ಹೊಂದಿರಬೇಕು. ಈ ಪೈಕಿ ವಿಭಾಗವೊಂದರಲ್ಲಿ ಕನಿಷ್ಠ 5 ವರ್ಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರಬೇಕು.
2. ಅಭ್ಯರ್ಥಿಗಳು ವೈದ್ಯಕೀಯ ಅಧೀಕ್ಷಕರಾಗಿ ಆಡಳಿತಾನುಭವ ಹೊಂದಿರಬೇಕು ಅಥವಾ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರಾಗಿ 5 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದವರಿಗೆ ಆದ್ಯತೆ ನೀಡಲಾಗುವುದು.
3. ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು 58 ವರ್ಷಗಳನ್ನು ಮೀರಿರಬಾರದು ಅಥವಾ ವಯೋನಿವೃತ್ತಿ ಹೊಂದಲು ಕನಿಷ್ಠ 2 ವರ್ಷಗಳ ಸೇವಾ ಅವಧಿ ಬಾಕಿ ಇರಬೇಕು.
4. ಅಭ್ಯರ್ಥಿಯು ಖಾಯಂ ಪೂರ್ವ ಸೇವಾ ಅವಧಿಯನ್ನು ಪೂರ್ಣಗೊಳಿಸಿರಬೇಕು.
5. ನಿರ್ದೇಶಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿಗಳನ್ನು ಪೂರೈಸಿರಬೇಕು.

**ವೇತನ ಶ್ರೇಣಿ:**- 37,400-67,000 + ಎ.ಜಿ.ಪಿ 10,000/- ಮತ್ತು ಅನ್ವಯವಾಗುವ ಭತ್ಯೆಗಳು

**ಸೇವಾವಧಿ:**-

ನೇಮಕಾತಿಯ ದಿನಾಂಕದಿಂದ ನಾಲ್ಕು ವರ್ಷಗಳು, ಅಥವಾ ಮುಂದಿನ ಸರ್ಕಾರದ ಆದೇಶದವರೆಗೆ (ಯಾವುದು ಮೊದಲೊ ಅಲ್ಲಿಯವರೆಗೆ)

ನಿಗದಿತ ಅರ್ಜಿ ನಮೂನೆಯನ್ನು ಡಿ.ಎಂ.ಇ. ವೆಬ್‌ಸೈಟ್: www.karnataka.gov.in/dmekarnataka ಅಥವಾ ಶಿಮ್ಸ್, ಶಿವಮೊಗ್ಗ ವೆಬ್‌ಸೈಟ್: www.sims-shimoga.com ಇಲ್ಲಿಂದ ಡೌನ್‌ಲೋಡ್ ಮಾಡಿಕೊಂಡು, ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು ಇವರ ಹೆಸರಿನಲ್ಲಿ ರೂ. 5000/-ಗಳ (ಹಿಂದಿರುಗಿಸಲಾಗದಿರುವ) ಡಿಮ್ಯಾಂಡ್ ಡ್ರಾಫ್ಟ್ ಅನ್ನು ಪಡೆದು ಭರ್ತಿ ಮಾಡಿದ ಅರ್ಜಿಯೊಂದಿಗೆ (ಅಗತ್ಯ ದಾಖಲೆಗಳು ಸೇರಿದಂತೆ) ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದ ರಾವ್ ವೃತ್ತ ಬೆಂಗಳೂರು-560009 ರವರಿಗೆ ನೊಂದಾಯಿತ ಅಂಚೆ ಮುಖಾಂತರ ಸ್ವೀಕೃತಿ ಬಾಕಿ ಪತ್ರದೊಂದಿಗೆ **ದಿನಾಂಕ: 12-06-2018ರಂದು ಸಂಜೆ 5:00 ಗಂಟೆಯೊಳಗೆ** ತಲುಪಿಸತಕ್ಕದ್ದು.

ವೈದ್ಯಕೀಯ ಶಿಕ್ಷಣ ನಿರ್ದೇಶಕರು,ಬೆಂಗಳೂರು